ಓ.ಎಸ್. 150/2018
ಪಿ.ಡಬ್ಲ್ಯೂ-2

ದಿನಾಂಕಃ **11.09.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಬಿ.ಎಂ.ವಕೀಲರಿಂದಃ

ನಾನು ಮೋಟಾರ್ ರಿಪೇರಿ ಕೆಲಸವನ್ನು ಮಾಡುತ್ತೇನೆ. ನನ್ನ ಅಂಗಡಿ ಬಡವನಹಳ್ಳಿಯಲ್ಲಿರುವ ಬಸವೇಶ್ವರ ಹೋಟೆಲ್‌ನ ಪಕ್ಕದಲ್ಲಿರುತ್ತದೆ. ನಮ್ಮ ಅಂಗಡಿಯ ಮುಂದೆ ನಿಂತುಕೊಂಡರೆ ದಾವಾ ಸ್ವತ್ತು ಕಾಣುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗ ಕಟ್ಟಡ ಕಟ್ಟಿರುವುದರಿಂದ ಕಾಣುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಕಟ್ಟಡಗಳನ್ನು 1995 ಮತ್ತು 2000 ನೇ ಸಾಲಿನಲ್ಲಿ ಕಟ್ಟಿರುತ್ತಾರೆ. ಸದರಿ ಕಟ್ಟಡಗಳನ್ನು ವಾದಿ ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿಯೇ ಕಟ್ಟಿದ್ದರು ಎಂದು ಸೂಚಿಸುವುದು ಸರಿಯಲ್ಲ.

**2.** ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ. ಪ್ರತಿವಾದಿಗಳ ಮನೆಯನ್ನು ನಾನು ನೋಡಿರುವುದಿಲ್ಲ. ಶಿರಾ ಮಧುಗಿರಿ ರಸ್ತೆಯಿಂದ ಉತ್ತರ-ದಕ್ಷಿಣವಾಗಿ ಇರುವಂತಹ ರಸ್ತೆಯಲ್ಲಿ ಹೋಗುವಾಗ ಪಶ್ಚಿಮ ದಿಕ್ಕಿನಲ್ಲಿ ವಾದಿಯ ನಿವೇಶನಗಳು ಇರುತ್ತವೆ. ಸದರಿ ರಸ್ತೆಯಲ್ಲಿ ನಾನು ತಿರುಗಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ಮೋಟಾರ್ ರಿಪೇರಿ ಕೆಲಸ ಮಾಡುವ ಉದ್ದೇಶದಿಂದ ಸದರಿ ರಸ್ತೆಯಲ್ಲಿ ತಿರುಗಾಡುತ್ತಿರುತ್ತೇನೆ.

**3.** ಪ್ರಸ್ತುತ ದಾವಾ ಸ್ವತ್ತುಗಳಲ್ಲಿ ವಾದಿಯ ಸಂಬಂಧಿಕರಾದ ಮಂಜುನಾಥ್‌ರವರು ಗುತ್ತಿಗೆ ಕಾಮಗಾರಿ ಮಾಡುವುದಕ್ಕೆ ಬಳಸುವಂತಹ ಸಾಮಗ್ರಿಗಳನ್ನು ಶೇಖರಿಸಿಟ್ಟುಕೊಂಡಿರುತ್ತಾರೆ.

ಸದರಿ ಸ್ವತ್ತಿನಲ್ಲಿ ಕಾಂಕ್ರಿಟ್ ಮಿಷನ್, ಮರದ ನಿಲುವು ಮತ್ತು ಹಲಗೆಗಳನ್ನು ಹಾಕಿರುತ್ತಾರೆ. ನಾನು ದಾವಾ ಸ್ವತ್ತನ್ನು ನೋಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**4.** ನನ್ನ ಹೆಂಡತಿ ಲೋಪಾಲ್ ಶಾಲೆಯಲ್ಲಿ ಆಯ ಕೆಲಸ ಮಾಡುತ್ತಿರುತ್ತಾರೆ. ಲೋಪಾಲ್ ಸಂಸ್ಥೆಗೆ ವಾದಿಯೇ ಅಧ್ಯಕ್ಷರು ಎಂದರೆ ಸರಿ. ನನ್ನ ಹೆಂಡತಿಯನ್ನು ವಾದಿಯೇ ಕೆಲಸಕ್ಕೆ ಸೇರಿಸಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**5.** ಪ್ರತಿವಾದಿಗಳು ಅಳತೆ ಮಾಡಲು ಅರ್ಜಿ ಸಲ್ಲಿಸಿದಾಗ ಭೂ ಮಾಪಕರು ಸ್ಥಳಕ್ಕೆ ಬಂದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಕೆಲಸ ಮಾಡುತ್ತಿರುವ ಸ್ಥಳದಿಂದಲೇ ಪ್ರತಿವಾದಿಗಳ ಸ್ವತ್ತು ಪ್ರಾರಂಭವಾಗುವುದರಿಂದ ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ